೨ ಹೊಸ ದಿಗಂತ
ಗುರುವಾರ, 21 ಮಾರ್ಚ್ 2024, ಹುಬ್ಬಳ್ಳಿ

# ಕೆಎಲ್‌ಎಸ್ ವಿಡಿಐಟಿಗೆ ಅನುದಾನ

**ಹಳಿಯಾಳ:** ಭಾರತ ಸರ್ಕಾರದ ಶಿಕ್ಷಣ ಸಚಿವಾಲಯದ ಅಂಗ ಸಂಸ್ಥೆ ಆವಿಷ್ಕಾರ ಪರಿಷತ್ತು ಪಟ್ಟಣದ ಕೆಎಲ್‌ಎಸ್ ವಿಡಿಐಟಿ ಮಹಾವಿದ್ಯಾಲಯಕ್ಕೆ ಅನುದಾನ ನೀಡಿದೆ. ಔದ್ಯಮಶೀಲತೆ ಹಾಗೂ ಹೊಸ ಆವಿಷ್ಕಾರಗಳಿಗೆ ಪುಷ್ಟಿ ನೀಡಲು ನುರಿತ ಉದ್ಯಮಿಗಳು ಹಾಗೂ ವಿಜ್ಞಾನಿಗಳಿಂದ ವಿದ್ಯಾರ್ಥಿಗಳಿಗೆ ಮತ್ತು ಪ್ರಾಧ್ಯಾಪಕರಿಗೆ ಉಪನ್ಯಾಸ ನೀಡಲು ಆವಿಷ್ಕಾರ ಪರಿಷತ್ತು ಅನುದಾನ ನೀಡಿದೆ. ದೇಶಾದ್ಯಂತ 471 ವಿವಿಧ ಮಹಾವಿದ್ಯಾಲಯಗಳಿಗೆ ಅನುದಾನ ನೀಡಲಾಗಿದೆ. ರಾಜ್ಯದ ಕೇವಲ 34 ತಾಂತ್ರಿಕ ಮಹಾವಿದ್ಯಾಲಯಗಳಿಗೆ ಈ ಅನುದಾನ ದೊರಕಿದ್ದು, ಅವುಗಳಲ್ಲಿ ನಮ್ಮ ಮಹಾವಿದ್ಯಾಲಯವು ಒಂದಾಗಿರುವುದು ಹರ್ಷ ತಂದಿದೆ ಎಂದು ಆಡಳಿತ ಮಂಡಳಿಯ ಅಧ್ಯಕ್ಷ ವಿನಾಯಕ ಲೋಕುರ್ ಹೇಳಿದ್ದಾರೆ. ಸರ್ಕಾರವು ನೀಡಿರುವ ಅನುದಾನವನ್ನು ಸದುಪಯೋಗ ಪಡಿಸಿಕೊಂಡು ವಿದ್ಯಾರ್ಥಿಗಳು ಉದ್ಯಮಶೀಲರಾಗಲು ಪ್ರೋತ್ಸಾಹಿಸುತ್ತೇವೆ ಎಂದು ಪ್ರಾಚಾರ್ಯ ಡಾ. ವಿ.ಎ. ಕುಲಕರ್ಣಿ ಹೇಳಿದ್ದಾರೆ. ಮಹಾವಿದ್ಯಾಲಯದ ಆವಿಷ್ಕಾರ ಪರಿಷತ್ತಿನ ಅಧ್ಯಕ್ಷ ಡಾ. ಮಹೇಂದ್ರ ದೀಕ್ಷಿತ್ ಮತ್ತು ಸಿಬ್ಬಂದಿ ಸಂತಸ ವ್ಯಕ್ತ ಪಡಿಸಿದ್ದಾರೆ.

